# ಇದೋ ಇನ್ನೂ ಚಿಕ್ಕ ಅಕ್ವೇರಿಯಂ!





ಉಲ್ಲಾಸ್ ದೇವನೂರ

ಇದೇ 'ವಂಡರ್‌ಪುಟ'ದಲ್ಲಿ ಪ್ರಪಂಚದ ಅತೀ ಚಿಕ್ಕ ಅಕ್ವೇರಿಯಂ ಬಗ್ಗೆ ಇತ್ತೀಚೆಗೆ ಓದಿದ್ದು ನೆನಪಿದೆಯೇ? 'ವಂಡರ್' ಎನಿಸುವಂತಹ ಚಿಕ್ಕ ಅಕ್ವೇರಿಯಂ ಅನ್ನು ರಷ್ಯಾ ದೇಶದ ಅನಾಟೋಲಿ ಕೊನೆನ್ಕೊ ರೂಪಿಸಿದ್ದರು. ಇದನ್ನು ಓದಿದ ನೀವು 'ಆಹಾ' ಎಂದು ಅಚ್ಚರಿಗೊಂಡಿದ್ದಿರಿ. ನಿಮ್ಮಂತೆಯೇ ಮೈಸೂರಿನ ಯುವ ಕಲಾವಿದ ಉಲ್ಲಾಸ್ ದೇವನೂರ ಸಹ ವಿಸ್ಮಯಗೊಂಡಿದ್ದರು. ಆದರೆ, ಇವರು ಅಷ್ಟಕ್ಕೆ ಸುಮ್ಮನೆ ಕೂರಲಿಲ್ಲ. 'ನಾನೂ ಒಂದು ಕೈ ಏಕೆ ನೋಡಬಾರದು? ಈಗಿರುವುದಕ್ಕಿಂತ ಚಿಕ್ಕ ಅಕ್ವೇರಿಯಂ ಮಾಡಿಯೇ ತೀರುತ್ತೇನೆ' ಎನ್ನುವ ನಿರ್ಧಾರಕ್ಕೆ ಬಂದರು.

ಸರಿ, ಶುರುವಾಯ್ತು ಪ್ರಪಂಚದ ಅತೀ ಚಿಕ್ಕ ಅಕ್ವೇರಿಯಂಗೇ ಸವಾಲು ಹಾಕುವ ಕುಸುರಿ ಕೆಲಸ. ಅನಾಟೋಲಿ ಕೊನೆನ್ಕೊ 30 ಮಿ.ಮೀ. ಅಗಲ, 24 ಮಿ.ಮೀ. ಎತ್ತರ ಮತ್ತು 1.4 ಮಿ.ಮೀ ಆಳದ ಅಕ್ವೇರಿಯಂ ರೂಪಿಸಿದ್ದಾರೆ. ಆದರೆ ಉಲ್ಲಾಸ್ ದೇವನೂರ 2.5 ಮಿ.ಮೀ ಅಗಲ, 2 ಮಿ.ಮೀ. ಎತ್ತರ ಮತ್ತು 1 ಮಿ.ಮೀ. ಆಳ ಹೊಂದಿರುವ ಅಕ್ವೇರಿಯಂ ಸಿದ್ಧಪಡಿಸಿದ್ದಾರೆ. ಈ ಅಕ್ವೇರಿಯಂ ಅನ್ನು ಕಪ್ಪೆಚಿಪ್ಪು, ಸಣ್ಣ ಗಿಡಗಳಿಂದ ಅಲಂಕರಿಸಲಾಗಿದೆ. ಇದರಲ್ಲಿ 'ಮೋಲಿ' ಜಾತಿಗೆ ಸೇರಿದ ಜೋಡಿ ಮೀನುಗಳು ಆನಂದವಾಗಿ ವಿಹರಿಸುತ್ತಿವೆ. ಅನಾಟೋಲಿ ಕೊನೆನ್ಕೊ ಅಕ್ವೇರಿಯಂನ ಮೇಲ್ಭಾಗವನ್ನು ಮುಚ್ಚಿಲ್ಲ. ಆದರೆ ಉಲ್ಲಾಸ್ ಫಾರ್ಮಿಕ ಶೀಟ್‌ನಿಂದ ಮನೆಯ ಛಾವಣಿಯಂತೆ ವಿನ್ಯಾಸ ಮಾಡಿ ಮುಚ್ಚಿದ್ದಾರೆ. ಈ ಮೂಲಕ ಬಹುದೂರದ ರಷ್ಯಾದಲ್ಲಿ ನಿರ್ಮಾಣವಾದ ದಾಖಲೆಯನ್ನು ಮೈಸೂರಿನಲ್ಲಿ ಅಳಿಸಿ ಹಾಕಿದ್ದಾರೆ.

ಎಲ್ಲ ಪರಿಕರಗಳನ್ನು ಹೊಂದಿಸಿಕೊಂಡು ಕುಳಿತರೆ 90 ನಿಮಿಷಗಳಲ್ಲಿ ನಿಮ್ಮ ಕಲ್ಪನೆಯ ಪುಟಾಣಿ ಅಕ್ವೇರಿಯಂ ಸಿದ್ಧವಾಗುತ್ತದೆ. ಉಲ್ಲಾಸ್‌ಗೆ ಇದು ಮೊದಲ ಯತ್ನವಾದ್ದರಿಂದ ಸ್ವಲ್ಪ ಹೆಚ್ಚು ಸಮಯ ತೆಗೆದುಕೊಂಡಿತು.

'ಸುಧಾ (ಆಗಸ್ಟ್ 16, 2012) ಸಂಚಿಕೆಯ ವಂಡರ್‌ಪುಟದಲ್ಲಿ ಪ್ರಪಂಚದ ಅತೀ ಚಿಕ್ಕ ಅಕ್ವೇರಿಯಂ ಬಗ್ಗೆ ಓದಿದೆ. ಅದಕ್ಕಿಂತ ಚಿಕ್ಕ ಅಕ್ವೇರಿಯಂ ನಿರ್ಮಿಸುವ ಮನಸ್ಸಾಯಿತು. ಒಂದೊಂದೇ ವಸ್ತುಗಳನ್ನು ಹೊಂದಿಸಿಕೊಂಡು ಆಕಾರ ಕೊಡುತ್ತಾ ಹೋದೆ. ಒಂದೇ ಬಾರಿಗೆ ಯಶಸ್ಸು ಸಿಗಲಿಲ್ಲ. ಗಾಜಿನ ತುಂಡುಗಳನ್ನು ಫೆವಿಕ್ವಿಕ್‌ನಿಂದ ಅಂಟಿಸಿ ನೀರು ತುಂಬಿದೆ. ಸ್ವಲ್ಪ ಹೊತ್ತಿಗೇ ನೀರು ಖಾಲಿಯಾಗಿತ್ತು! ಅಕ್ವೇರಿಯಂ ನಿರ್ಮಿಸಲು ಬಳಸುವ ಅಂಟನ್ನು ಸಿರಿಂಜ್‌ನಲ್ಲಿ ತುಂಬಿಸಿಕೊಂಡುಬಂದೆ. ಅದರಿಂದ ಮತ್ತೆ ಗಾಜುಗಳನ್ನು ಅಂಟಿಸಿದೆ. ನೀರು ಖಾಲಿಯಾಗುವುದು ನಿಂತಿತು. ನಾನು ಅತೀ ಚಿಕ್ಕ ಅಕ್ವೇರಿಯಂ ನಿರ್ಮಿಸುವಲ್ಲಿ ಯಶಸ್ವಿಯಾದೆ' ಎಂದು ಉಲ್ಲಾಸ್ ಖುಷಿಯಿಂದಲೇ ಹೇಳಿದರು.

ಈ ಪುಟ್ಟ ಅಕ್ವೇರಿಯಂ ನಿರ್ಮಿಸಲು ಕೇವಲ 50 ರೂಪಾಯಿಗಳು ಖರ್ಚಾಗಿದೆ. ಆದರೆ ಉಲ್ಲಾಸ್ ದೇವನೂರ ಅವರ ಕಲ್ಪನೆ, ಕೌಶಲ, ಪರಿಶ್ರಮ ಹೆಚ್ಚು ಖರ್ಚಾಗಿದೆ.

ಉಲ್ಲಾಸ್ ದೇವನೂರ ಸಂಪರ್ಕ ಸಂಖ್ಯೆ: 9986846012

■ ಸುದೇಶ ದೊಡ್ಡಪಾಳ್ಯ

ಚಿತ್ರಗಳು: ಎಚ್.ಜಿ.ಪ್ರಶಾಂತ್